

# ಗುಟ್ಟೊಡೆದ ಮೇಲೂ ಉಳಿಯುವ ಆಹ್ಲಾದ

ತಾಂತ್ರಿಕ ಚಾಕಚಕ್ಯತೆಯ ಮೂಲಕ ಅಚ್ಚರಿಗೆ ಕೆಡಹುವ 'ರೋಗನ್ ಜೋಶ್' ಕಿರುಚಿತ್ರ, ಆ ಕ್ಷಣದ ಸರ್ಪ್ರೈಸ್‌ನ ಹೊರತಾಗಿಯೂ ಹಲವು ಕಾರಣಗಳಿಗೆ ಇಷ್ಟವಾಗುತ್ತದೆ.

■ ಗೌರಿ

ಒಂದು ಕೃತಿಯ ಯಶಸ್ಸಿನಲ್ಲಿ ಹೂರಣದ ಪಾಲೆಷ್ಟು? ನಿರೂಪಣಾ ವಿಧಾನದ ಪಾಲೆಷ್ಟು? ಇವೆರಡರಲ್ಲಿ ಯಾವುದು ಮುಖ್ಯ ಎಂಬುದನ್ನು ಸಾರಾಸಗಟಾಗಿ ನಿರ್ಧರಿಸುವುದು ಕಷ್ಟಸಾಧ್ಯ. ಅದರಲ್ಲಿಯೂ ಒಂದು ಒಳ್ಳೆಯ ಕೃತಿಯಲ್ಲಿ ತಂತ್ರ ಮತ್ತು ಹೂರಣ ಎರಡೂ ಒಂದಕ್ಕೊಂದು ಬೆಸೆದುಕೊಂಡು, ಒಂದರ ಪ್ರಭಾವವನ್ನು ಇನ್ನೊಂದು ಪೋಷಿಸುತ್ತ, ತೀವ್ರಗೊಳಿಸುತ್ತ ಇರುತ್ತವೆ. ಅವೆರಡನ್ನು ಪರಸ್ಪರ ಬೇರ್ಪಡಿಸಿ ನೋಡಲು ಸಾಧ್ಯವೇ ಇಲ್ಲ ಎಂಬಂತೆ ಮಿಳಿತಗೊಂಡಿರುತ್ತದೆ. ಅದರಲ್ಲಿಯೂ ದೃಶ್ಯಮಾಧ್ಯಮದಲ್ಲಿ ಈ ಎರಡರ ಹೆಣಿಗೆ ಉಂಟುಮಾಡುವ ಪರಿಣಾಮ ಅಗಾಧವಾದದ್ದು. ಇಲ್ಲಿ ಕಂಟೆಂಟ್ ಮತ್ತು ಟೆಕ್ನಿಕ್ ಇವೆರಡೂ ಜೋಡಿ ಎತ್ತುಗಳ ಹಾಗೆ ಪ್ರೇಕ್ಷಕನನ್ನು ಕಥನದ ಬಂಡಿಯಲ್ಲಿ ಕರೆದುಕೊಂಡು ಹೋಗುತ್ತಿರುತ್ತವೆ. ಕೆಲವೊಮ್ಮೆ ಇವೆರಡರಲ್ಲಿ ಒಂದು ದುರ್ಬಲವಾಗಿದ್ದಾಗ ಇನ್ನೊಂದು ಅದರ ಭಾರವನ್ನೂ ಹೊತ್ತು ಮುನ್ನಡೆಸುವುದೂ ಇದೆ.

ಸಂಗತಿ ಮತ್ತು ತಂತ್ರ ಎರಡನ್ನೂ ಶಕ್ತವಾಗಿ ಬಳಸಿಕೊಳ್ಳುತ್ತಲೇ, ತಂತ್ರಗಾರಿಕೆ ಎರಡು ಹೆಜ್ಜೆ ಮುಂದೆ ಇಟ್ಟು ರೋಚಕ ಅನುಭವ ಹುಟ್ಟಿಸುವ ಪರಿಗೆ ಉದಾಹರಣೆಗಾಗಿ ಸಂಜೀವ್ ವಿಗ್ ಅವರ ಕಿರುಚಿತ್ರ 'ರೋಗನ್ ಜೋಶ್' ನೋಡಬಹುದು.

ಅದು ಲಾಸ್ಟ್ ಸಪ್ಪರ್ ಅನ್ನು ನೆನಪಿಸುವಂಥ ಔತಣಕೂಟ. ಬಹಳ ಜನರೇನೂ ಇಲ್ಲ. ಐದೇ ಜನ.

ತಾಜ್ ಹೋಟೆಲಿನ ಮಾಸ್ಟರ್ ಶೆಫ್ ವಿಜಯ ಕಪೂರ್‌ನ 65ನೇ ವರ್ಷದ ಬರ್ತ್‌ಡೇ. ಅದಕ್ಕಾಗಿ ಅವನು ತುಂಬ ಆಸ್ಥೆಯಿಂದ ಮನೆಯಲ್ಲಿ ತನ್ನ ಸಿಗ್ನೇಚರ್ ಡಿಶ್ ರೋಗನ್ ಜೋಶ್ ಅನ್ನು ರೆಡಿ ಮಾಡಿದ್ದಾನೆ. ಅಡುಗೆ ರೆಡಿಯಾಗುವಷ್ಟರಲ್ಲಿ ಅಲ್ಲಿಗೆ ಪ್ರೀತಿ ಮತ್ತು ಅವಳ ಪತಿ ಝಾಕಿರ್ ಬರುತ್ತಾರೆ. ವಿಜಯ್ ಮತ್ತು ಝಾಕಿರ್ ಸ್ನೇಹಿತರು. ವಿಜಯ್ ಕಪೂರ್‌ನ ಮಗ ವರುಣ್ 'ಎರಡು ನಿಮಿಷ' ತಡವಾಗಿ ಬರುತ್ತಾನೆ. ತಂದೆ–ಮಗನ ಮಧ್ಯೆ ಒಂದು ಬಗೆಯ ಶೀತಲ ಸಮರ ಇದೆ. ಅಲ್ಲಿ ಕುಳಿತ ಎಲ್ಲರೊಳಗೂ ಒಂದಲ್ಲ, ಹಲವು ಕಥೆಗಳಿವೆ. ಅವು ಒಂದಕ್ಕೊಂದು ಹೆಣೆದುಕೊಂಡಿವೆ, ಕೆಲವು ಕವಲೊಡೆದಿವೆ. ಅವರ ಮಾತುಗಳು ಕೆಲವು ಸಲ ವರ್ತಮಾನದಿಂದ ಭೂತಕ್ಕೆ ಜಾರುತ್ತವೆ. ಮುಖಭಾವ ವಿಚಿತ್ರವಾಗಿ ಕಾಣುತ್ತದೆ. ವರುಣ್‌ನ ಹೆಂಡತಿ ರಿತಿಕಾ, ಮಗ ಕಬೀರನ ಪ್ರಸ್ತಾಪವೂ ಬರುತ್ತದೆ. ಆದರೆ ಅವರು ಅಲ್ಲಿ ಇಲ್ಲ. ಸ್ವತಃ ವರುಣನೇ 'ರಿತಿಕಾ ಮತ್ತೊಂದು ಮದುವೆಯಾಗಬೇಕು' ಅನ್ನುತ್ತಾನೆ. 'ಕಬೀರನಿಗೊಬ್ಬ ಅಪ್ಪ ಬೇಕು' ಅನ್ನುತ್ತಾನೆ. ಅವಳಿಗೆ ಆಫೀಸಿನಲ್ಲಿ ಪರಿಚಯವಾದ ವ್ಯಕ್ತಿಯೊಬ್ಬನ ಕುರಿತೂ ಪ್ರಸ್ತಾಪಿಸುತ್ತಾನೆ.

ಈ ಎಲ್ಲರ ವಿಚಿತ್ರ ನಡವಳಿಕೆಗಳಿಕೆ ಕಾರಣ ಕೊನೆಯ ಗಳಿಗೆಯಲ್ಲಿ ಬಿಚ್ಚಿಕೊಳ್ಳುತ್ತ ಹೋಗುತ್ತವೆ. ಕ್ಲೈಮ್ಯಾಕ್ಸ್‌ನಲ್ಲಿನ ಅದೊಂದು ಪಲ್ಲಟದ ನಂತರ ಅದುವರೆಗಿನ ಮಾತುಗಳಿಗೆ, ಸಂಜ್ಞೆಗಳಿಗೆ, ಮೌನಕ್ಕೆಲ್ಲ ಬೇರೆಯದೇ ಅರ್ಥಪ್ರಾಪ್ತಿಯಾಗಿ ಹೊಳೆಯತೊಡಗುತ್ತವೆ.

ಸರಳವಾದ ವಿಷಯವೊಂದನ್ನು ತಂತ್ರಗಾರಿಕೆಯ ನೈಪುಣ್ಯದಿಂದ ವಾವ್ ಎನ್ನುವಂತೆ ಹೇಳುವ ಕಿರುಚಿತ್ರವಿದು. ಸಸ್ಪೆನ್ಸ್ ಅನ್ನಬಹುದಾದರೂ ಕೌತುಕದ ಆಚೆಗಿನ ಹಲವು ಆಯಾಮಗಳೂ ಕಾಳಜಿಯೂ ಇದಕ್ಕಿದೆ. ಸೂಕ್ಷ್ಮವಾಗಿ ನೋಡಿದರೆ ವೈವಿಧ್ಯದ ಭಾರತವೊಂದರ ನಿಜವಾದ ಸೌಂದರ್ಯವನ್ನು ತೋರಿಸುತ್ತಲೇ ಅದರ ಮೇಲೆ ಆದ ದಾಳಿಯ ಗಾಯ ಉಂಟುಮಾಡುವ ನೋವನ್ನೂ ಕಟ್ಟಿಕೊಡುತ್ತದೆ. ಆದರೆ ಈ ಚಿತ್ರದ ಸಸ್ಪೆನ್ಸ್ ಎರಡನೇ ಮೂರನೇ ವೀಕ್ಷಣೆಯಲ್ಲಿ ಮಿತಿಯಾಗಿಯೂ ಕಾಣಲಾರಂಭಿಸುತ್ತದೆ. ಗುಟ್ಟೊಡೆದ ಮೇಲೆ ಒಗಟಿನ ಸ್ವಾರಸ್ಯ ಹೋಗಿಬಿಡುವ ಹಾಗೆ. ಆದರೆ ನಿರೂಪಣೆಯ ಸ್ವಾರಸ್ಯದಾಚೆಗೂ ಮತ್ತೆ ಮತ್ತೆ ನೋಡುವಂತೆ ಮಾಡುವಲ್ಲಿ ತಾಂತ್ರಿಕ ಗಟ್ಟಿತನದ ಜೊತೆಗೆ ಮಾಗಿದ ನಟರ ಪ್ರಬುದ್ಧವಾದ ನಟನೆಯ ಪಾತ್ರ ದೊಡ್ಡದು.

ಎರಡು ನಿಮಿಷದ ಎಚ್ಚರಗೇಡಿತನದಲ್ಲಿ ಹದಗೆಡುವ ಅಡುಗೆಯನ್ನೂ, ಬದುಕನ್ನೂ ಒಟ್ಟೊಟ್ಟಿಗೇ ತೋರಿಸುವ ಈ ಕಿರುಚಿತ್ರ, ರುಚಿಕಟ್ಟಾದ ಊಟದ ನಂತರದ ರಸಾಸ್ವಾದದ ಆಹ್ಲಾದವನ್ನು ಮನಸ್ಸಲ್ಲಿ ತುಂಬುತ್ತದೆ.

ಹೆಸರು: ರೋಗನ್ ಜೋಶ್
ನಿರ್ದೇಶನ: ಸಂಜೀವ ವಿಗ್
ನಿರ್ಮಾಣ:ಎಂಡಮೋಲ್ ಶೈನ್ ಇಂಡಿಯಾ
ಛಾಯಾಗ್ರಹಣ ತಂಡ: ಪ್ರೈಮ್ ಫೋಕಸ್
ಸಂಗೀತ: ರಾಜು ಸಿಂಗ್, ಅಭಿನ್ ಥಾಮಸ್, ರಚೆಲ್ ಸಿಂಗ್



ಸಂಜೀವ್ ವಿಗ್

ಈ ಕಿರುಚಿತ್ರ ವೀಕ್ಷಣೆಗೆ bit.ly/2S6dmuw ಕೊಂಡಿ/ ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ.